Phone: 08282-257424
E-Mail: kuhrmsection@gmail.com

Fax: 08282-256262
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451

**ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ**

ಸಂಖ್ಯೆ:ಕುವಿ:ಮಾಸನಿ–2:3775:2022–23

ದಿನಾಂಕ:09–12–2022

## ಕಛೇರಿ ಆದೇಶ

ವಿಷಯ: "ಸುಶಾಸನ ಮಾಸಾಚರಣೆ" ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದನ್ವಯ ವಿಶ್ವವಿದ್ಯಾಲಯವು ಕಡ್ಡಾಯವಾಗಿ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು

ಉಲ್ಲೇಖ:
1) ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಸಭೆ ದಿನಾಂಕ:28–11–2022.
2) ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಆದೇಶ ಸಂ: ಇಡಿ: 387:ಯುಆರ್‌ಸಿ:2022, ಬೆಂಗಳೂರು, ದಿ:01–12–2022.
3) ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯ ನಡವಳಿ ದಿನಾಂಕ: 03–12–2022.
4) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:09–12–2022.

***

"ಸುಶಾಸನ ಮಾಸಾಚರಣೆ" ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಉಲ್ಲೇಖ (2)ರ ಆದೇಶಾನುಸಾರ ವಿಶ್ವವಿದ್ಯಾಲಯವು ಕಡ್ಡಾಯವಾಗಿ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ದಿನಾಂಕ: 03–12–2022 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯಲ್ಲಿ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

ಸದರಿ ಸಭೆಯ ನಿರ್ಣಯದ ಮೇರೆಗೆ ವಿಶ್ವವಿದ್ಯಾಲಯ ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು, ಅಧ್ಯಾಪಕರು, ಘಟಕ ಮತ್ತು ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳು ಪ್ರಾಂಶುಪಾಲರುಗಳು ಉಲ್ಲೇಖ (3)ರ ಸಭೆಯ ನಡವಳಿಯನ್ವಯ ತಮ್ಮ ವಿಭಾಗಗಳಿಗೆ / ಕಾಲೇಜುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ದಿನಾಂಕ: 12–12–2022ರೊಳಗೆ ಕಡ್ಡಾಯವಾಗಿ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಕುಲಸಚಿವರಿಗೆ ಸಲ್ಲಿಸಲು ಆದೇಶಿಸಲಾಗಿದೆ.

ತಪ್ಪಿದಲ್ಲಿ ಸಂಭಾವನೀಯ ಆಗುಹೋಗುಗಳಿಗೆ ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರುಗಳು ಜವಾಬ್ದಾರರಾಗುತ್ತಾರೆ.

ಉಲ್ಲೇಖ (3)ರ ನಡವಳಿಗಳ ನಿರ್ಣಯಗಳ ಜಾರಿ ಕುರಿತು ಮೇಲ್ವಿಚಾರಣೆ ಮಾಡಿ, ಪ್ರತಿ ಹಂತದಲ್ಲಿ ಪ್ರಗತಿ ವರದಿಯನ್ನು ಸಲ್ಲಿಸಲು ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

1) ಪ್ರೊ. ರಿಯಾಜ್ ಮೆಹಮೂದ್, ಡೀನರು, ವಿಜ್ಞಾನ ನಿಕಾಯ.
2) ಪ್ರೊ. ಅಶ್ಫಕ್ ಅಹಮದ್, ನೋಡಲ್ ಅಧಿಕಾರಿಗಳು, ಯುಯುಸಿಎಂಎಸ್.
3) ಪ್ರೊ. ಬಿ.ಇ.ಕುಮಾರಸ್ವಾಮಿ, ಮಾನ್ಯ ಕುಲಪತಿಗಳ ವಿಶೇಷಾಧಿಕಾರಿಗಳು (ಸಂಶೋಧನೆ ಮತ್ತು ಅಭಿವೃದ್ಧಿ)

ನಡವಳಿಗಳ ಪ್ರತಿಯನ್ನು ಲಗತ್ತಿಸಿದೆ.

ಆದೇಶಾನುಸಾರ

**ಕುಲಸಚಿವ**
**ಕುವೆಂಪು ವಿಶ್ವವಿದ್ಯಾನಿಲಯ**

ಗೆ:

1) ಕುಲಸಚಿವರು(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
2) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
3) ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
4) ಪ್ರೊ. ರಿಯಾಜ್ ಮೆಹಮೂದ್, ಡೀನರು, ವಿಜ್ಞಾನ ನಿಕಾಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
5) ಪ್ರೊ. ಅಶ್ಫಕ್ ಅಹಮದ್, ನೋಡಲ್ ಅಧಿಕಾರಿಗಳು, ಯುಯುಸಿಎಂಎಸ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ಪ್ರೊ. ಬಿ.ಇ.ಕುಮಾರಸ್ವಾಮಿ, ಮಾನ್ಯ ಕುಲಪತಿಗಳ ವಿಶೇಷಾಧಿಕಾರಿಗಳು (ಸಂಶೋಧನೆ ಮತ್ತು ಅಭಿವೃದ್ಧಿ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
7) ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ/ ಶಿವಮೊಗ್ಗ/ ಕಡೂರು.
8) ಕಾರ್ಯಪಾಲಕ ಅಭಿಯಂತರರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
9) ಸಹ್ಯಾದ್ರಿ ವಿಜ್ಞಾನ / ಸಹ್ಯಾದ್ರಿ ಕಲಾ / ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು / ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜುಗಳ ಪ್ರಾಚಾರ್ಯರುಗಳಿಗೆ, ಶಿವಮೊಗ್ಗ / ಶಂಕರಘಟ್ಟ
10) ನಿರ್ದೇಶಕರು: - ಪ್ರಸಾರಾಂಗ / ವಿದ್ಯಾರ್ಥಿ ಕ್ಷೇಮಪಾಲನೆ / ದೂರ ಶಿಕ್ಷಣ ನಿರ್ದೇಶನಾಲಯ/ ಕಾಲೇಜು ಅಭಿವೃದ್ಧಿ ಪರಿಷತ್ತು/ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ / ಅಂಬೇಡ್ಕರ್ ಅಧ್ಯಯನ ಕೇಂದ್ರ, / ಅಭಿವೃದ್ಧಿ ವಿಭಾಗ/ ದೈಹಿಕ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
11) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಬಿ.ಹೆಚ್.ರಸ್ತೆ, ಕಡೂರು
12) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐಡಿಎಸ್‌ಜಿ ಕಾಲೇಜು ಆವರಣ, ಜ್ಯೋತಿನಗರ, ಚಿಕ್ಕಮಗಳೂರು.
13) ವೈದ್ಯಾಧಿಕಾರಿಗಳು, ವಿಶ್ವವಿದ್ಯಾಲಯ ಆರೋಗ್ಯ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
14) ಸಂಯೋಜನಾಧಿಕಾರಿಗಳು, ಐ.ಕ್ಯೂ.ಎ.ಸಿ. / ಮಹಿಳೆಯರ ಮೂಲ ಸೌಕರ್ಯಗಳ ಅಭಿವೃದ್ಧಿ ಘಟಕ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
15) ಶಿಕ್ಷಕ ಸಲಹೆಗಾರರು, ಸ್ನಾತಕೋತ್ತರ ಪುರುಷರ:ಮಹಿಳಾ ವಿದ್ಯಾರ್ಥಿಗಳ ನಿಲಯ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
16) ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ವಿಭಾಗ, ನಗರ ಕಛೇರಿ ಬೈಪಾಸ್ ರಸ್ತೆ, ಶಿವಮೊಗ್ಗ.
17) ಸಂಚಾಲಕರು, ಪಠ್ಯೇತರ ಚಟುವಟಿಕೆ ವಿಭಾಗ, ಎಸ್.ಸಿ/ಎಸ್.ಟಿ. ಸೆಲ್/ ಓ.ಬಿ.ಸಿ. ಅಂಬೇಡ್ಕರ್ ಅಧ್ಯಯನ ಪೀಠ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
18) ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
19) **ನಿರ್ದೇಶಕರು, ಯು.ಸಿ.ಸಿ.ಎಫ್., ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.**
20) ವಿದ್ಯಾರ್ಥಿ ಉತ್ತೇಜನ ಸೇವಾ ಕೇಂದ್ರ (ಪ್ಲೇಸ್‌ಮೆಂಟ್ ಸೆಲ್, ವಿದೇಶಿ ವಿದ್ಯಾರ್ಥಿಗಳ ಘಟಕ, ವಿದ್ಯಾರ್ಥಿಗಳ ಕುಂದುಕೊರತೆ ಪರಿಹಾರ ಘಟಕ), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
21) ನೋಡಲ್ ಅಧಿಕಾರಿಗಳು, ಯುಯುಸಿಎಂಎಸ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
22) ಎಲ್ಲಾ ಉಪಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
23) ಎಲ್ಲಾ ಸಹಾಯಕ ಕುಲಸಚಿವರು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
24) ಆಪ್ತ ಕಾರ್ಯಾಲಯ: ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪರೀಕ್ಷಾಂಗ):ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಿಯ, ಶಂಕರಘಟ್ಟ
25) ವ್ಯವಸ್ಥಾಪಕರು, ವಿಶ್ವವಿದ್ಯಾಲಯದ ಅತಿಥಿ ಗೃಹ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

ಪ್ರತಿ:

1) ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಕಛೇರಿ ಪ್ರತಿ.

# ಕುವೆಂಪು ವಿಶ್ವವಿದ್ಯಾಲಯ

"ಸುಶಾಸನ ಮಾಸಾಚರಣೆ" ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದನ್ವಯ (ಸಂಖ್ಯೆ: ಇಡಿ:387:ಯುಆರ್‌ಸಿ:2022 ಬೆಂಗಳೂರು, ದಿನಾಂಕ:01–12–2022) ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿ ನಿರ್ಣಯಿಸಲು ದಿನಾಂಕ:03–12–2022 ರಂದು ಅಪರಾಹ್ನ 12.00 ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯ ನಡವಳಿಗಳು.

<u>ಹಾಜರಿದ್ದ ಸದಸ್ಯರು:</u>

| | | | |
|---|---|---|---|
| 1) | ಕುಲಪತಿಗಳು | – | ಅಧ್ಯಕ್ಷರು |
| 2) | ಕುಲಸಚಿವರು (ಆಡಳಿತ) | – | ಸದಸ್ಯರು |
| 3) | ಹಣಕಾಸು ಅಧಿಕಾರಿಗಳು | – | ಸದಸ್ಯರು |
| 4) | ನೋಡಲ್ ಅಧಿಕಾರಿಗಳು<br>ಯು.ಯು.ಸಿ.ಎಂ.ಎಸ್ | – | ಸದಸ್ಯರು |
| 5) | ಕುಲಪತಿಗಳ ವಿಶೇಷಾಧಿಕಾರಿಗಳು<br>(ಸಂಶೋಧನೆ ಮತ್ತು ಅಭಿವೃದ್ಧಿ) | – | ಸದಸ್ಯರು |
| 6) | ಉಪಕುಲಸಚಿವರು<br>ಪ್ರಾಧಿಕಾರಗಳ ವಿಭಾಗ | – | ಸದಸ್ಯರು |
| 7) | ಉಪಕುಲಸಚಿವರು<br>ದಾಸ್ತಾನು ಮತ್ತು ಖರೀದಿ ವಿಭಾಗ | – | ಸದಸ್ಯರು |
| 8) | ಉಪಕುಲಸಚಿವರು<br>ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ | – | ಸಂಚಾಲಕರು |
| 9) | ಸಂಯೋಜನಾಧಿಕಾರಿ<br>ಯು.ಸಿ.ಸಿ.ಎಫ್ ವಿಭಾಗ | – | ಸದಸ್ಯರು |
| 10) | ಉಪಕುಲಸಚಿವರು<br>ಎಸ್ಟೇಟ್ ವಿಭಾಗ | – | ಆಹ್ವಾನಿಸಿದ ಸದಸ್ಯರು |

**ಗೈರು ಹಾಜರಾದ ಸದಸ್ಯರು:**

| | | | |
|---|---|---|---|
| 1) | ಡೀನರು<br>ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | – | ಸದಸ್ಯರು |
| 2) | ನಿರ್ದೇಶಕರು,<br>ಪಿ.ಎಂ.ಇ.ಮಂಡಳಿ | – | ಸದಸ್ಯರು |
| 3) | ನಿರ್ದೇಶಕರು,<br>ಕಾಲೇಜು ಅಭಿವೃದ್ಧಿ ಪರಿಷತ್ | – | ಸದಸ್ಯರು |

| | | | |
|---|---|---|---|
| 4) | ಸಂಚಾಲಕರು<br>ಪಠ್ಯೇತರ ಚಟುವಟಿಕೆ ವಿಭಾಗ | – | ಸದಸ್ಯರು |
| 5) | ಉಪಕುಲಸಚಿವರು<br>ಅಭಿವೃದ್ಧಿ ವಿಭಾಗ | – | ಸದಸ್ಯರು |
| 6) | ಉಪಕುಲಸಚಿವರು<br>ಶೈಕ್ಷಣಿಕ ವಿಭಾಗ | – | ಸದಸ್ಯರು |

ಸಭೆಗೆ ಹಾಜರಾದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿ, ನಂತರ ಕಾರ್ಯಾಸೂಚಿಯನ್ವಯ ವಿಷಯಗಳನ್ನು ಚರ್ಚೆಗೆ ಮಂಡಿಸಿದರು.

## ಭಾಗ–1

01) **ವಿಷಯ:** ಯುಜಿಸಿ ಮಾರ್ಗಸೂಚಿಗಳು ಹಾಗೂ ಮಾನದಂಡಗಳಂತೆ ಮಾನ್ಯ ರಾಜ್ಯಪಾಲರು ಮತ್ತು ಕಲಾಧಿಪತಿಗಳಿಂದ ಅನುಮೋದನೆಗೊಂಡ ಸಂಬಂಧಪಟ್ಟ ವಿಶ್ವವಿದ್ಯಾಲಯದ ಎಲ್ಲಾ ಪರಿನಿಯಮಗಳು (ಪಿಡಿಎಫ್ ವಿನ್ಯಾಸದಲ್ಲಿ)

**ನಿರ್ಣಯ:** ಪ್ರಾಧಿಕಾರಗಳ ವಿಭಾಗವು ಪರಿನಿಯಮಗಳ ಸಮಿತಿ ಮುಂದಿಟ್ಟು ಅದನ್ನು ಕುಲಸಚಿವರ ಗಮನಕ್ಕೆ ತಂದು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

02) **ವಿಷಯ:** ವಾರ್ಷಿಕ ಆಯವ್ಯಯದ ಸಂಪೂರ್ಣ ಮಾಹಿತಿಯೊನ್ನಳಗೊಂಡ ಕಾಲಾನುಕ್ರಮವಾಗಿ ವಾರ್ಷಿಕ ಆಯವ್ಯಯಗಳ ಎಲ್ಲಾ ದಾಖಲೆಗಳು.

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

03) **ವಿಷಯ:** ಕಾಲಾನುಕ್ರಮವಾಗಿ ಎಲ್ಲಾ ವಾರ್ಷಿಕ ವರದಿಗಳು ಹಾಗೂ ಲೆಕ್ಕ ಪರಿಶೋಧನಾ ವರದಿಗಳು.

**ನಿರ್ಣಯ:** ಕ್ರಮವಾಗಿ ಪ್ರಾಧಿಕಾರಗಳ ವಿಭಾಗ ಮತ್ತು ಹಣಕಾಸು ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

04) **ವಿಷಯ:** ಸಿಂಡಿಕೇಟ್ ಶೈಕ್ಷಣಿಕ ಪರಿಷತ್ತು ಹಾಗೂ ಹಣಕಾಸು ಸಮಿತಿಗಳ ರಚನೆಯ ವಿಧಿ ವಿಧಾನ, ಈ ಪ್ರಾಧಿಕಾರಗಳ ಪಾತ್ರ ಹಾಗೂ ಹೊಣೆಗಾರಿಕೆಗಳು, ಇವುಗಳ ಸದಸ್ಯರ ವಿವರಗಳು ಈ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿ ಮತ್ತು ನಡವಳಿಗಳು (ಪಿಡಿಎಫ್ ವಿನ್ಯಾಸದಲ್ಲಿ) ಈ ಸಭೆಗಳ ಕಾರ್ಯಸೂಚಿಯನ್ನು ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ದಿನಾಂಕವೇ

ಜಾಲತಾಣದಲ್ಲಿ ಅಳವಡಿಸತಕ್ಕದ್ದು ಮತ್ತು ಅದೇ ರೀತಿ ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ದಿನಾಂಕವೇ ಸಭೆಯ ನಡವಳಿ ಜಾಲತಾಣದಲ್ಲಿ ಅಳವಡಿಸತಕ್ಕದ್ದು.

**ನಿರ್ಣಯ:** ಕ್ರಮವಾಗಿ ಪ್ರಾಧಿಕಾರಗಳ ವಿಭಾಗ ಮತ್ತು ಹಣಕಾಸು ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

05) **ವಿಷಯ:** ವಿಶ್ವವಿದ್ಯಾಲಯದ ಎಲ್ಲಾ ಸ್ಥಿರಾಸ್ತಿಗಳ ವಿವರಗಳು:

**ನಿರ್ಣಯ:** ಎಸ್ಟೇಟ್ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ಕಡ್ಡಾಯವಾಗಿ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

06) **ವಿಷಯ:** ವಿಶ್ವವಿದ್ಯಾಲಯದ ಎಲ್ಲಾ ಚರಾಸ್ತಿಗಳ ಅಧ್ಯಯನ ವಿಭಾಗವಾರು ವಿವರಗಳು.

**ನಿರ್ಣಯ:** ಕ್ರಮವಾಗಿ ದಾಸ್ತಾನು ಮತ್ತು ಖರೀದಿ ವಿಭಾಗ ಹಾಗೂ ಅಭಿವೃದ್ಧಿ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

07) **ವಿಷಯ:** ವಿಶ್ವವಿದ್ಯಾಲಯದ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳು, ಬ್ಯಾಂಕ್ ಖಾತೆಗಳ ಆರಂಭ ಮತ್ತು ನಿರ್ವಹಣೆಯ ಉದ್ದೇಶಗಳು ಹಾಗೂ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಬ್ಯಾಂಕ್ ಬ್ಯಾಲೆನ್ಸ್ ಹಾಗೂ ಠೇವಣಿಗಳ ಬಗ್ಗೆ ವಿವರಗಳು ಜಾಲತಾಣದಲ್ಲಿ ಪ್ರಕಟಿಸಲಾಗುವ ಈ ಮಾಹಿತಿಯನ್ನು ಕಡ್ಡಾಯವಾಗಿ ಪ್ರತಿ ತಿಂಗಳು ನವೀಕರಿಸತಕ್ಕದ್ದು.

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

08) **ವಿಷಯ:** ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ವಿವಿಧ ಸರ್ಕಾರದ ಇಲಾಖೆಗಳಿಂದ / ಪ್ರಾಧಿಕಾರಗಳಿಂದ/ ಮಂಡಳಿಗಳಿಂದ/ ಸಂಸ್ಥೆಗಳಿಂದ ಮಂಜೂರಾಗಿರುವ ಅನುದಾನ, ಮಂಜೂರಾತಿ ಆದೇಶಗಳು, ಅನುದಾನವನ್ನು ಜಮಾ ಮಾಡಿರುವ ಬ್ಯಾಂಕ್ ಖಾತೆಯ ವಿವಿರಗಳು, ಅನುದಾನದ ಉಪಯೋಗಕ್ಕಾಗಿ /ಬಳಕೆಗಾಗಿ ತೆಗೆದುಕೊಂಡ ಕ್ರಮ, ಕ್ರಿಯಾ ಯೋಜನೆಯ ವಿವರ, ಸಾಧಿಸಿರುವ ಮಾಹೆವಾರು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳು.

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

09) **ವಿಷಯ:** ವಿಶ್ವವಿದ್ಯಾಲಯಕ್ಕೆ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸರ್ಕಾರೇತರ ಮೂಲಗಳಿಂದ ಮಂಜೂರಾಗಿರುವ /ಸಂದಾಯವಾಗಿರುವ ಸಂಪನ್ಮೂಲಗಳ ವಿವಿರಗಳು (including all forms of Own Source Revenue.) ಅದರ ಜಮಾ, ಖರ್ಚು ಹಾಗೂ ಠೇವಣಿಸಿದ ಬ್ಯಾಂಕ್ ಖಾತೆಯ ವಿವರಗಳು.

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

10) **ವಿಷಯ:** ವಿಶ್ವವಿದ್ಯಾಲಯದ (Pension Fund) ಬಗ್ಗೆ ಸಂಪೂರ್ಣ ವಿವರ, ಮಾಹೆವಾರು ಜಮಾ ಮತ್ತು ವಿಲೆವಾರಿ ವಿವರಗಳು.

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

11) **ವಿಷಯ:** ವಿಶ್ವವಿದ್ಯಾಲಯದ ಪ್ರತಿ ತಿಂಗಳು HRMS ಹಾಗೂ non-HRMS payments ವಿವರಗಳು

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

12) **ವಿಷಯ:** ವಿಶ್ವವಿದ್ಯಾಲಯದ ಇರುವ ವಿವಿಧ Corpus Fund ವಿವರಗಳು

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

13) **ವಿಷಯ:** ವಿಶ್ವವಿದ್ಯಾಲಯದ ಮಾಹೆವಾರು ಮಾಸಿಕ ಆದಾಯ ಹಾಗೂ ವೆಚ್ಚದ ಸಂಪೂರ್ಣ ವಿವರಗಳು:

**ನಿರ್ಣಯ:** ಹಣಕಾಸು ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

14) **ವಿಷಯ:** 2022-23ನೇ ಸಾಲಿನಲ್ಲಿ ಪ್ರಕಟಿಸಲಾಗಿರುವ ಟೆಂಡರ್‌ಗಳು Technical ಮತ್ತು Financial bid ನಡವಳಿಗಳು, ಖರೀದಿಗಳ ಆದೇಶಗಳು, ಕೈಗೊಳ್ಳಲಾದ ಸಂಗ್ರಹಣೆಗಳ ಸಂಪೂರ್ಣ ವಿವರ ಹಾಗೂ ಅನ್ವಯಿಸುವ ಸಂಗ್ರಹಣೆಗಳಿಗೆ ಸಂಬಂಧಪಟ್ಟ stock book register extract.

**ನಿರ್ಣಯ:** ಕ್ರಮವಾಗಿ ಯು.ಸಿ.ಸಿ.ಎಫ್ ವಿಭಾಗ, ದಾಸ್ತಾನು ಮತ್ತು ಖರೀದಿ ವಿಭಾಗ, ಇಂಜಿನಿಯರಿಂಗ್ ವಿಭಾಗ, ಪರೀಕ್ಷಾ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

15) **ವಿಷಯ:** ವಿಶ್ವವಿದ್ಯಾಲಯವು ಪ್ರಸ್ತುತ ತೆಗೆದುಕೊಂಡಿರುವ ಎಲ್ಲ ಮೂಲಭೂತ ಅಭಿವೃದ್ಧಿ ಕಾಮಗಾರಿಗಳ ವಿವರಗಳು (tender details, approved estimate, work order agreement with the agency) ಹಾಗೂ ಪ್ರತಿ ತಿಂಗಳು ಸಾಧಿಸುವ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳು.

**ನಿರ್ಣಯ:** ಕ್ರಮವಾಗಿ ಇಂಜಿನಿಯರಿಂಗ್ ವಿಭಾಗ ಮತ್ತು ಪರೀಕ್ಷಾ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

16) **ವಿಷಯ:** ಸ್ಥಾಪನೆ ವರ್ಷ ಹಾಗೂ ಮೂಲ ಉದ್ದೇಶಗಳ ಮಾಹಿತಿಯೊಂದಿಗೆ ವಿಶ್ವವಿದ್ಯಾಲಯ ಅಧ್ಯಯನ ವಿಭಾಗ, ಅಧ್ಯಯನ ಕೇಂದ್ರ, ಅಧ್ಯಯನ ಪೀಠಗಳ ವಿವರಗಳು, ಅಧ್ಯಯನ ವಿಭಾಗಗಳಲ್ಲಿ ನಡೆಸಲಾಗುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳು, ಕೋರ್ಸುಗಳು, Details of accreditation etc., ಬೋಧಕ ಸಿಬ್ಬಂದಿಯ Curriculum vitae ಹಾಗೂ ಅವರ ಆಸಕ್ತಿಗಳು, ಅವರಿಂದ ಕೈಗೊಳ್ಳಲಾದ ಸಂಶೋಧನೆ, ಅವರ ಪ್ರಕಟಣೆಗಳು, ಸಾಧನೆಗಳು ಮತ್ತು ಅವರ ಸಂಪರ್ಕದ ವಿವರಗಳು, ಇದೇ ರೀತಿಯ ಮಾಹಿತಿಯನ್ನು ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳು ಮತ್ತು ಘಟಕ ಕಾಲೇಜಿಗೆ ತಮ್ಮ ವೆಬ್‌ಸೈಟ್‌ಗಳಲ್ಲಿ ಬಹಿರಂಗಪಡಿಸಬೇಕು (ಒಂದು ವೇಳೆ ಘಟಕ ಕಾಲೇಜಿಗೆ ಯಾವುದೇ ವೆಬ್‌ಸೈಟ್ ಇಲ್ಲದಿದ್ದರೆ, ಅದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿಯೇ ಒಂದು ಟ್ಯಾಬ್ ಅಡಿಯಲ್ಲಿ ಮಾಡಬಹುದು). ಈ ವರ್ಷವು ಸೇರಿದಂತೆ ಕಳೆದು ಐದು ವರ್ಷಗಳ ಶೈಕ್ಷಣಿಕ ಕಾರ್ಯಕ್ರಮಗಳ ಸೆಮಿಸ್ಟರ್‌ವಾರು ಫಲಿತಾಂಶಗಳ ವಿವರಗಳು.

**ನಿರ್ಣಯ:** ಕ್ರಮವಾಗಿ ಅಭಿವೃದ್ಧಿ ವಿಭಾಗ, ಶೈಕ್ಷಣಿಕ ವಿಭಾಗ ಮತ್ತು ಯುಸಿಸಿಎಫ್ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

17) **ವಿಷಯ:** ಕರ್ತವ್ಯ ಹಾಗೂ ಹೊಣೆಗಾರಿಕೆಯ ವಿವರಗಳೊಂದಿಗೆ ಬೋಧಕೇತರ ಸಿಬ್ಬಂದಿಯ ಮಾಹಿತಿ:

**ನಿರ್ಣಯ:** ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

18) **ವಿಷಯ:** ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ವಿವಿಧ Programmes ಮತ್ತು Courses ಗಳ ಶೀರ್ಷಿಕೆ, ಮಾನ್ಯತೆಯ ವಿವರಗಳು, ವಿವರವಾದ ಶುಲ್ಕ ವಿನ್ಯಾಸ, ಕೋರ್ಸ್‌ಗಳ ಪಠ್ಯಕ್ರಮ (syllabus and curriculum) 2022–2023ನೇ ಸಾಲಿನ ಅನುಮೋದಿತ ವಿದ್ಯಾರ್ಥಿ ಪ್ರಮಾಣ ಮತ್ತು ಪ್ರವೇಶ ಪಡೆದ ವಿದ್ಯಾರ್ಥಿ ಪ್ರಮಾಣ, ವಿಶ್ವವಿದ್ಯಾಲಯಗಳು ನಡೆಸುವ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳು, ಇದೇ ರೀತಿಯ ಮಾಹಿತಿಯನ್ನು ಅದರ ಎಲ್ಲಾ ಸಂಯೋಜಿತ ಕಾಲೇಜುಗಳು ಮತ್ತು ಘಟಕ ಕಾಲೇಜುಗಳು ತಮ್ಮ ವೆಬ್‌ಸೈಟ್‌ಗಳಲ್ಲಿ ಬಹಿರಂಗಪಡಿಸಬೇಕು (ಒಂದು ವೇಳೆ ಘಟಕ ಕಾಲೇಜಿಗೆ ಯಾವುದೇ ವೆಬ್‌ಸೈಟ್ ಇಲ್ಲದಿದ್ದರೆ, ಅದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿಯೇ ಒಂದು ಟ್ಯಾಬ್ ಅಡಿಯಲ್ಲಿ ಮಾಡಬಹುದು). ಈ ವರ್ಷವು ಸೇರಿದಂತೆ ಕಳೆದ ಐದು ವರ್ಷಗಳ ಶೈಕ್ಷಣಿಕ ಕಾರ್ಯಕ್ರಮಗಳ ಸೆಮಿಸ್ಟರ್‌ವಾರು ಫಲಿತಾಂಶಗಳ ವಿವರಗಳು.

**ನಿರ್ಣಯ:** ಕ್ರಮವಾಗಿ ಶೈಕ್ಷಣಿಕ ವಿಭಾಗ, ಪ್ರಾಧಿಕಾರಗಳ ವಿಭಾಗ ಮತ್ತು ಪರೀಕ್ಷಾ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

19) **ವಿಷಯ:** ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ವಿವರ, ಅವರ ಅನುಮೋದಿತ Courses and intake, details of accreditation etc

**ನಿರ್ಣಯ:** ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

20) **ವಿಷಯ:** ಸೆಮಿಸ್ಟರ್‌ವಾರು ತರಗತಿಗಳ ವೇಳಾಪಟ್ಟಿ ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಕಾರ್ಯ ಹಂಚಿಕೆ ವಿವರಗಳು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ದಿನಾಂಕವಾರು ಅನುಸೂಚನೆ /ವೇಳಾಪಟ್ಟಿ.

**ನಿರ್ಣಯ:** ಶೈಕ್ಷಣಿಕ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

21) **ವಿಷಯ:** ಸೆಮಿಸ್ಟರ್‌ವಾರು ಪರೀಕ್ಷಾ ವೇಳಾಪಟ್ಟಿ ಪರೀಕ್ಷಾ, ಶುಲ್ಕದ ವಿವರಗಳು ಹಾಗೂ ಪರೀಕ್ಷಾ ಪ್ರಕ್ರಿಯೆಯ ಹಂತಗಳ ಹಾಗೂ ಒಟ್ಟಾರೆ ಅವಧಿಯ ಮಾಹಿತಿ ಮತ್ತು ಫಲಿತಾಂಶದ ವಿವರಗಳು.

**ನಿರ್ಣಯ:** ಪರೀಕ್ಷಾ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

22) **ವಿಷಯ:** ವಿಶ್ವವಿದ್ಯಾಲಯವು ವಿಧಿಸುತ್ತಿರುವ ಎಲ್ಲಾ Fines and Penalties ಗೆ ಸಂಬಂಧಿಸಿದಂತೆ ವಿವಿಧ ಆದೇಶಗಳು ಹಾಗೂ ಮಾಹೆವಾರು ಇಂತಹ Fines and Penalties ಇಂದ ಸಂಗ್ರಹಿಸಲಾಗುತ್ತಿರುವ ಮೊತ್ತ.

**ನಿರ್ಣಯ:** ಕ್ರಮವಾಗಿ ಹಣಕಾಸು ವಿಭಾಗ, ಪರೀಕ್ಷಾ ವಿಭಾಗ ಮತ್ತು ಶೈಕ್ಷಣಿಕ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

23) **ವಿಷಯ:** ಸಂಶೋಧನಾ ಕೇಂದ್ರಗಳು ಸೇರಿದಂತೆ ಅಧ್ಯಯನ ಪೀಠಗಳು, ಯೋಜನೆಗಳು, ಪ್ರಕಟಣೆಗಳು, ವರ್ಷವಾರು ಪಡೆದ ಅನುದಾನಗಳು, ಜರ್ನಲ್‌ಗಳು ಮತ್ತು ಉದ್ಯಮ ಪ್ರಾಯೋಜಿತ ಸಂಶೋಧನೆಯ ವಿವರಗಳು.

**ನಿರ್ಣಯ:** ಕ್ರಮವಾಗಿ ಅಭಿವೃದ್ಧಿ ವಿಭಾಗ ಮತ್ತು ಶೈಕ್ಷಣಿಕ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

24) **ವಿಷಯ:** ಗ್ರಂಥಸೂಚಿ (Catalogue) ಡೇಟಾಬೇಸ್ (ದತ್ತ ಸಂಚಯ) ನೊಂದಿಗೆ ಚಂದಾದಾರರಾಗಿರುವ ಎಲ್ಲಾ ಜರ್ನಲ್‌ಗಳ ಹೆಸರುಗಳು, ಡಿಜಿಟಲ್ ಸಂಪುಟಗಳನ್ನು ಒಳಗೊಂಡಂತೆ ಎಲ್ಲಾ ಸಂಪುಟಗಳು, ವಿಶ್ವವಿದ್ಯಾಲಯದ ಜರ್ನಲ್‌ಗಳು, ವಿಶ್ವವಿದ್ಯಾಲಯದ ಪ್ರಕಟಣೆಗಳು, ವಿಶ್ವವಿದ್ಯಾಲಯದ ಬೋಧಕರ ಪ್ರಕಟಣೆಗಳು, ವಿಶ್ವವಿದ್ಯಾಲಯದ ಪ್ರಶ್ನೆ ಪತ್ರಿಕೆಗಳು ಮತ್ತು ಪತ್ರಾಗಾರಗಳು, ಗ್ರಂಥಾಲಯದ ಸಮಯ, ಅಲ್ಲಿನ ಸೇವೆಗಳು, ಗ್ರಂಥಾಲಯದಲ್ಲಿ ಲಭ್ಯವಿರುವ ಫೋಟೋಕಾಪಿ, ಮುದ್ರಣ, ಸ್ಕ್ಯಾನ್, ವಿತರಣೆ, ತಾಂತ್ರಿಕ ಸಹಾಯಕ, ರೆಫರಲ್ ಸೇವೆ / ಸಂಶೋಧನಾ ಸಹಾಯದಂತಹ ವಿವರಗಳು.

**ನಿರ್ಣಯ:** ಗ್ರಂಥಾಲಯ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

25) **ವಿಷಯ:** ವಾರ್ಷಿಕ ರಜಾದಿಗಳ ಸೂಚಿಪಟ್ಟಿ.

**ನಿರ್ಣಯ:** ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

26) **ವಿಷಯ:** ವಿಶ್ವವಿದ್ಯಾಲಯಗಳ ವಿವಿಧ ಶಾಖೆಗಳಿಂದ ಹೊರಡಿಸಲಾಗುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಮತ್ತು ಇತರೆ ಸುತ್ತೋಲೆಗಳನ್ನು ಆ ದಿನವೇ ಜಾಲತಾಣದಲ್ಲಿ ಅಳವಡಿಸುವುದು.

**ನಿರ್ಣಯ:** ಯು.ಸಿ.ಸಿ.ಎಫ್ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

27) **ವಿಷಯ:** ಪ್ಲೇಸ್‌ಮೆಂಟ್ ಕೋಶಗಳ ವಿವರಗಳು ಮತ್ತು ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಉದ್ಯೋಗದ ವಿವರಗಳು.

**ನಿರ್ಣಯ:** ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ (ಪ್ಲೇಸ್‌ಮೆಂಟ್ ಸೆಲ್)ವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

28) **ವಿಷಯ:** ಹಳೆಯ ವಿದ್ಯಾರ್ಥಿಗಳ ಸಂಪರ್ಕ ಮತ್ತು ವಿಶ್ವವಿದ್ಯಾಲಯದಿಂದ ಪ್ರಾರಂಭಿಸಿದ ಹಳೆಯ ವಿದ್ಯಾರ್ಥಿಗಳ ಸಂಘದ ವಿವರಗಳು ಮತ್ತು ಅದರ ಸದಸ್ಯತ್ವದ ವಿವರಗಳು.

**ನಿರ್ಣಯ:** ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು ವಿಭಾಗವಾರು, ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

29) **ವಿಷಯ:** ಯೋಜನೆಗಳು, ಇಂಟರ್ನ್‌ಶಿಪ್‌ಗಳು ಮತ್ತು ವಿದ್ಯಾರ್ಥಿ ಮಾರ್ಗದರ್ಶನ ಕಾರ್ಯಕ್ರಮ, ಇಂಟರ್‌ಶಿಪ್ / ಅಪ್ರೆಂಟಿಸ್‌ಶಿಪ್ ಎಂಬೆಡೆಡ್ ಪದವಿ ಕಾರ್ಯಕ್ರಮಗಳ ವಿವರಗಳು.

**ನಿರ್ಣಯ:** ಕ್ರಮವಾಗಿ ಗ್ರಂಥಾಲಯ ವಿಭಾಗ ಮತ್ತು ಶೈಕ್ಷಣಿಕ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

30) **ವಿಷಯ:** ಪಿಹೆಚ್‌ಡಿ ಪ್ರವೇಶಗಳು, ವಿದ್ಯಾರ್ಥಿ ಪ್ರಮಾಣ ಸಂಖ್ಯೆ ಹಾಗೂ ಪ್ರಸ್ತುತ ಪಿಹೆಚ್‌ಡಿ ವಿದ್ವಾಂಸರ ವಿವಿರಗಳ ಜೊತೆಗೆ ಸಂಶೋಧನಾ ವಿವರಗಳು ಮತ್ತು ನಿಯೋಜಿಸಲಾಧ ಕೆಲಸ ವಿಶ್ವವಿದ್ಯಾಲಯದಿಂದ ವಿಷಯವಾರು ಗುರುತಿಸಲಾಗಿರುವ Recognised Research Centres ಸಂಪೂರ್ಣ ವಿವರಗಳು, Research Guides ವಿವರ ಹಾಗೂ ಅವರಿಗೆ ನಿಯೋಜಿಸಲಾಗಿರುವ ಸಂಶೋಧಕರ ವಿವರ.

**ನಿರ್ಣಯ:** ಶೈಕ್ಷಣಿಕ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ಕಡ್ಡಾಯವಾಗಿ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

31) **ವಿಷಯ:** ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಕೋಶದ ವಿವರಗಳು.

**ನಿರ್ಣಯ:** ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ (ವಿದೇಶಿ ವಿದ್ಯಾರ್ಥಿಗಳ ಘಟಕ)ವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

32) **ವಿಷಯ:** ವಿಶ್ವವಿದ್ಯಾಲಯದಲ್ಲಿ ಆವಿಷ್ಕಾರ ಕೇಂದ್ರದ ವಿವರಗಳು.

**ನಿರ್ಣಯ:** ಅಭಿವೃದ್ಧಿ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

33) **ವಿಷಯ:** ವಿಶ್ವವಿದ್ಯಾಲಯದಿಂದ ಜಾರಿಗೊಳಿಸಲಾದ ಕಲ್ಯಾಣ ಕಾರ್ಯಕ್ರಮಗಳು, ವಿದ್ಯಾರ್ಥಿ ವೇತನಗಳು, ಉಚಿತ ಶಿಕ್ಷಣ ಹಾಸ್ಟೆಲ್ ಸೌಲಭ್ಯಗಳು ಇತ್ಯಾದಿಗಳ ವಿವರಗಳು ಹಾಗೂ ನಿಗಧಿಪಡಿಸಿರುವ ಅನುದಾನ ಆರ್ಥಿಕ ಮತ್ತು ಭೌತಿಕ ವಿವರಗಳು.

**ನಿರ್ಣಯ:** ಕ್ರಮವಾಗಿ ಎಸ್.ಸಿ/ಎಸ್.ಟಿ ಘಟಕ ಮತ್ತು ಬಿ.ಸಿ.ಎಂ ಘಟಕಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

34) **ವಿಷಯ:** ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಕುಂದುಕೊರತೆ ಕೋಶದ ವಿವರಗಳು ಹಾಗೂ ದಾಖಲಾಗುವ ವಿವಿಧ ಕುಂದುಕೊರತೆಗಳ ವಿಲೇವಾರಿಯ ವಿವರಗಳು.

**ನಿರ್ಣಯ:** ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ (ವಿದ್ಯಾರ್ಥಿಗಳ ಕುಂದುಕೊರತೆ ಪರಿಹಾರ ಘಟಕ)ವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

35) **ವಿಷಯ:** ವಿಶ್ವವಿದ್ಯಾಲಯದಲ್ಲಿ ಆನ್‌ಲೈನ್ ಮತ್ತು ಡಿಜಿಟಲ್ ಕಾರ್ಯಕ್ರಮಗಳ ಸಂಪೂರ್ಣ ವಿವರಗಳು.

**ನಿರ್ಣಯ:** ಕ್ರಮವಾಗಿ ದೂರ ಶಿಕ್ಷಣ ನಿರ್ದೇಶನಾಲಯ ಮತ್ತು ಯುಸಿಸಿಎಫ್ ವಿಭಾಗಗಳು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

36) **ವಿಷಯ:** ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ದೂರ ಶಿಕ್ಷಣ ಕೋರ್ಸ್‌ಗಳ ವಿವರಗಳು.

**ನಿರ್ಣಯ:** ದೂರ ಶಿಕ್ಷಣ ನಿರ್ದೇಶನಾಲಯವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

37) **ವಿಷಯ:** ವಿಶ್ವವಿದ್ಯಾಲಯಲವು ಸಹಿ ಮಾಡಿರುವ ಎಲ್ಲಾ ಒಡಂಬಡಿಕೆ (MoU)ಗಳ ವಿವರಗಳು (ಪಿಡಿಎಫ್ ವಿನ್ಯಾಸದಲ್ಲಿ).

**ನಿರ್ಣಯ:** ಅಭಿವೃದ್ಧಿ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

38) **ವಿಷಯ:** ವಿಶ್ವವಿದ್ಯಾಲಯದಲ್ಲ ನಡೆಯು ಎಲ್ಲಾ ಪದೋನ್ನತಿ ಹಾಗೂ (MoU) ನಡವಳಿಗಳು.

**ನಿರ್ಣಯ:** ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗವು ಈ ಬಗ್ಗೆ ಕ್ರಮಕೈಗೊಂಡು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

## <u>ಭಾಗ–2</u>

a) **ವಿಷಯ:** ವಿಶ್ವವಿದ್ಯಾಲಯವು ನಡೆಸುವ ಎಲ್ಲಾ ವಿದ್ಯಾವಿಷಯಕ ಪರಿಷತ್ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಗಳನ್ನು ಯುಟ್ಯೂಬ್, ಫೇಸ್‌ಬುಕ್‌ನಲ್ಲಿ ಹಾಗೂ ಟ್ವಿಟರ್‌ನಲ್ಲಿ ನೇರ ಪ್ರಸಾರ ಮಾಡಲು ನಿಯಮಗಳಂತೆ ಕ್ರಮಜರುಗಿಸತಕ್ಕದ್ದು ಹಾಗೂ ಇವುಗಳ ಮೂಲಕ ವೆಬ್‌ಸೈಟ್‌ನಲ್ಲಿ ನೇರಪ್ರಸಾರ ಮಾಡಲು ತಕ್ಷಣದ ನಿಯಮಾನುಸಾರ ಕ್ರಮ ಕೈಗೊಳ್ಳತಕ್ಕದ್ದು.

**ನಿರ್ಣಯ:** ಕ್ರಮವಾಗಿ ಪ್ರಾಧಿಕಾರಗಳ ವಿಭಾಗ, ಯುಸಿಸಿಎಫ್ ಮತ್ತು ಪಿ.ಆರ್.ಓ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

b) **ವಿಷಯ:** ವಿಶ್ವವಿದ್ಯಾಲಯವು ಡಿಸೆಂಬರ್ ಅಂತ್ಯದ ವೇಳೆಗೆ ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು ಹಾಗೂ ಈ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮಾರ್ಗದರ್ಶನ, ಮೇಲ್ವಿಚಾರಣೆ ಮತ್ತು ಸಹಾಯವನ್ನು ಪಡೆಯತಕ್ಕದ್ದು.

**ನಿರ್ಣಯ:** ಕ್ರಮವಾಗಿ ಯುಯುಸಿಎಂಎಸ್ ಮತ್ತು ಹಣಕಾಸು ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

c) **ವಿಷಯ:** ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮಾರ್ಗದರ್ಶನದ ಮೇರೆಗೆ ಆನ್‌ಲೈನ್ ಡಿಜಿಟಲ್ ಕಲಿಕೆ ಮತ್ತು ಆನ್‌ಲೈನ್ ಡಿಜಿಟಲ್ ಕಲಿಕೆ ಮತ್ತು ಆನ್‌ಲೈನ್ ಕಾರ್ಯಕ್ರಮಗಳನ್ನು ಪ್ರಾರಂಭಿಸಲು UGCಗೆ ನಿಯಮಾನುಸಾರ ಅರ್ಜಿ ಸಲ್ಲಿಸಲು ಕ್ರಮಕೈಗೊಳ್ಳುವುದು ಹಾಗೂ ಮಾರ್ಚ್ ಅಂತ್ಯದ ವೇಳೆಗೆ ವಿಶ್ವವಿದ್ಯಾಲಯವು ಸ್ನಾತಕ ಕಾರ್ಯಕ್ರಮಗಳಲ್ಲಿ ಕನಿಷ್ಠ ಒಂದು ಕೋರ್ಸ್‌ನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು. ಇದಕ್ಕಾಗಿ ಯಾವುದೇ ಹೊಸ ಸಂಗ್ರಹಣೆ procurements ಮಾಡಬಾರದು. ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನೇ / ವ್ಯವಸ್ಥೆಯನ್ನೇ ಬಳಸತಕ್ಕದ್ದು.

**ನಿರ್ಣಯ:** ಕ್ರಮವಾಗಿ ದೂರ ಶಿಕ್ಷಣ ನಿರ್ದೇಶನಾಲಯ, ಯುಯುಸಿಎಂಎಸ್ ಮತ್ತು ಶೈಕ್ಷಣಿಕ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

d) **ವಿಷಯ:** ವಿಶ್ವವಿದ್ಯಾಲಯವು ತನ್ನ ವೆಬ್‌ಸೈಟ್‌ನಲ್ಲಿ ಹಳೆಯ ವಿದ್ಯಾರ್ಥಿಗಳ ಪೋರ್ಟಲ್ (Alumni Portal) ಅನ್ನು ಹಾಗೂ ಹಳೆಯ ವಿದ್ಯಾರ್ಥಿಗಳ ಸಂಪರ್ಕ ಕಛೇರಿಯನ್ನು ಜನವರಿ-2023ರ ಅಂತ್ಯದ ವೇಳೆಗೆ ಪ್ರಾರಂಭಿಸತಕ್ಕದ್ದು, ಹಳೆಯ ವಿದ್ಯಾರ್ಥಿಗಳ ಸಂಪರ್ಕ ಕಛೇರಿಯ ಕಾರ್ಯವಿಧಾನಗಳು ಪ್ರಕಾರ್ಯಗಳು ಮತ್ತು ಕಾರ್ಯವ್ಯಾಪ್ತಿಯ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

**ನಿರ್ಣಯ:** ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು ವಿಭಾಗವಾರು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

e) **ವಿಷಯ:** ವಿಶ್ವವಿದ್ಯಾಲಯವು ತನ್ನ ಅಗ್ರ 05 ಅತಿ ಹೆಚ್ಚು ದಾಖಲಾತಿಯನ್ನು ಹೊಂದಿದ ಕೋರ್ಸ್‌ಗಳಿಗೆ (top five highest enrolment courses) ಡಿಸೆಂಬರ್‌ನಲ್ಲಿ ಔಟ್‌ರೀಚ್ ಕಾರ್ಯಕ್ರಮಗಳನ್ನು ಆಯೋಜಿಸತಕ್ಕದ್ದು ಹಾಗೂ ಅದರ ವಿದ್ಯಾರ್ಥಿಗಳಿಗೆ ಇಂಟರ್‌ಶಿಪ್: ಸಂಶೋಧನೆ: ಉದ್ಯಮಶೀಲತೆ:ಉದ್ಯೋಗಕ್ಕಾಗಿ ಒಡಂಬಡಿಕೆ (MoU)ಗಳನ್ನು ಮಾಡಿಕೊಳ್ಳಲು ಉದ್ಯಮ ಸಂಸ್ಥೆಗಳು ಮತ್ತು ಸ್ಥಳೀಯ ಕೈಗಾರಿಕೆಗಳೊಂದಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳತಕ್ಕದ್ದು. ಈ ಮುಂದಿನ ಮೂರು ತಿಂಗಳಲ್ಲಿ ವಿಶ್ವವಿದ್ಯಾಲಯವು ಅಂತಹ ಕನಿಷ್ಠ ಐದು ಉದ್ಯಮ ಸಂಸ್ಥೆಗಳು/ಕೈಗಾರಿಕೆಗಳೊಂದಿಗೆ ಒಡಂಬಡಿಕೆ (MoU)ಗಳನ್ನು ಮಾಡಿಕೊಳ್ಳತಕ್ಕದ್ದು. ಎಲ್ಲಾ ಒಡಂಬಡಿಕೆ (MoU)ಗಳು ಸಾರ್ವಜನಿಕರಿಗೆ ಲಭ್ಯವಿರುವಂತೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸತಕ್ಕದ್ದು. ಇದಲ್ಲದೆ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಒಡಂಬಡಿಕೆ(MoU)ಗಳನ್ನು ಫಲಿತಾಂಶಕ್ಕಾಗಿ ಪುನರ್ ಪರಿಶೀಲಿಸುವುದು ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು. ಮಾರ್ಚ್ 2023ರ ವೇಳೆಗೆ ವಿದ್ಯಾರ್ಥಿಗಳ ಉದ್ಯೋಗಾವಕಾಶವನ್ನು ಹೆಚ್ಚಿಸಲು ಅಗ್ರ ಐದು ಅತಿ ಹೆಚ್ಚು ದಾಖಲಾತಿ

ಕಾರ್ಯಕ್ರಮಗಳಿಗೆ (top five highest enrolment course in the University) ಉದ್ಯಮ ಸಂವಾದದ ಆಧಾರದ ಮೇಲೆ ಪಠ್ಯಕ್ರಮದ ಪರಿಷ್ಕರಣೆಯನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

**ನಿರ್ಣಯ:** ಕ್ರಮವಾಗಿ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

f) **ವಿಷಯ:** ವಿಶ್ವವಿದ್ಯಾಲಯದ ಅಧ್ಯಾಪಕರ ಕಾರ್ಯಕ್ಷಮತೆಯ (Faculty Performance Appraisal) ಕುರಿತು ಮೌಲ್ಯಮಾಪನ ಮತ್ತು ಸ್ವಯಂ ಮೌಲ್ಯಮಾಪನ ವರದಿ, ಶೈಕ್ಷಣಿಕ ಘಟಕದ ಮುಖ್ಯಸ್ಥರಿಂದ ಪ್ರತಿಕ್ರಿಯೆ, ಮೌಲ್ಯಮಾಪನ ಸಮಿತಿಯಿಂದ ಪ್ರತಿಕ್ರಿಯೆ ಸೇರಿದಂತೆ ಸೂಚಕಗಳ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ರೂಪಿಸಿ ಪರಿಚಲನೆಗೊಳಿಸಲಿರುವ ಕ್ರಮ ವಿಧಾನಗಳನ್ನು ಡಿಸೆಂಬರ್ ಒಳಗೆ ಅಳವಡಿಸಿಕೊಳ್ಳತಕ್ಕದ್ದು.

**ನಿರ್ಣಯ:** ಕ್ರಮವಾಗಿ ಪಿ.ಎಂ.ಇ ಮತ್ತು ಐ.ಕ್ಯೂ.ಎ.ಸಿ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

g) **ವಿಷಯ:** ಎಲ್ಲಾ ಪಾಲುದಾರರೊಂದಿಗೆ ಮಾತನಾಡಲು ಹಾಗೂ ಅವರ ಕುಂದು ಕೊರತೆಗಳ ವಿವರಗಳನ್ನು ನೇರವಾಗಿ ಪಡೆಯಲು ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು (ಆಡಳಿತ), ಕುಲಸಚಿವರು (ಮೌಲ್ಯಮಾಪನ) ರವರುಗಳು ಸಾಮಾಜಿಕ ಜಾಲತಾಣಗಳಲ್ಲಿ ಖಾತೆಗಳನ್ನು ತೆರೆದು ವಿದ್ಯಾರ್ಥಿಗಳು ಹಾಗೂ ಪಾಲುದಾರರೊಂದಿಗೆ ನೇರ ಸಂವಾದ ನಡೆಸುವುದು ಹಾಗೂ ಇಲ್ಲಿ ಬರುವ ಅಭಿಪ್ರಾಯಗಳಿಗೆ ಹಾಗೂ ಕುಂದುಕೊರೆಗಳಿಗೆ ಕೂಡಲೇ ಪ್ರತಿಕ್ರಿಯಿಸುವುದು.

**ನಿರ್ಣಯ:** ಕ್ರಮವಾಗಿ ಯುಸಿಸಿಎಫ್ ಮತ್ತು ಪಿ.ಆರ್.ಓ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

h) **ವಿಷಯ:** ವಿಶ್ವವಿದ್ಯಾಲಯವು ಕಡ್ಡಾಯವಾಗಿ ಪ್ರತಿ ವರ್ಷ NIRF-Ranking ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳತಕ್ಕದ್ದು.

**ನಿರ್ಣಯ:** ಐ.ಕ್ಯೂ.ಎ.ಸಿ ವಿಭಾಗವು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

i) **ವಿಷಯ:** ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ ನೀಡುವ ಬಗ್ಗೆ, ಪಾರದರ್ಶಕ ಶೈಕ್ಷಣಿಕ ಮತ್ತು ಆಡಳಿತ ವ್ಯವಸ್ಥೆಯ ಬಗ್ಗೆ ಗ್ರಂಥಾಲಯ, ಕ್ರೀಡೆ, ಪ್ರಯೋಗಾಲಯ ಇತರೆ ಸೌಲಭ್ಯಗಳ ಲಭ್ಯತೆ ಬಗ್ಗೆ ಕುಲಪತಿಗಳು, ಕುಲಸಚಿವರುಗಳು ಹಾಗೂ ಡೀನ್‌ಗಳು ವಿಶ್ವವಿದ್ಯಾಲಯದ ಅಧೀನದ ಹಾಗೂ ವಿಶ್ವವಿದ್ಯಾಲಯಗಳಿಗೆ ಸಂಯೋಜನೆಗೊಂಡಿರುವ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಸಂವಾದ ನಡೆಸತಕ್ಕದ್ದು ಹಾಗೂ ಪರಿವೀಕ್ಷಣೆ ಕೈಗೊಳ್ಳತಕ್ಕದ್ದು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನ ಹಾಗೂ ಇತರೆ ವಿಷಯಗಳ ಕ್ರಮಕೈಗೊಂಡಿರುವ ಕುರಿತು ಪರಾಮರ್ಶಿಸತಕ್ಕದ್ದು.

**ನಿರ್ಣಯ:** ಕ್ರಮವಾಗಿ ಶೈಕ್ಷಣಿಕ ವಿಭಾಗ ಮತ್ತು ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

j) **ವಿಷಯ:** ವಿಶ್ವವಿದ್ಯಾಲಯವು ತನ್ನ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಗುರಿಗಳನ್ನು ಗುರುತಿಸಿ ಸಾಧಿಸಲು UGC ನೀಡಿರುವ ಮಾರ್ಗಸೂಚಿಗಳ ಪ್ರಕಾರ Institution Department Plan (IDP) ಅನ್ನು ಚರ್ಚೆ ಹಾಗೂ ಸಂವಾದದ ಮೂಲಕ ತಯಾರು ಮಾಡಲು ಡಿಸೆಂಬರ್ ಮಾಹೆಯಲ್ಲಿ ಕಾರ್ಯ ಪ್ರಾರಂಭ ಮಾಡಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಒಂದು ತಿಂಗಳೊಳಗೆ ಪ್ರಕಟಿಸುವುದು. ಉನ್ನತ ಶಿಕ್ಷಣ ಪರಿಷತ್ ಅಗತ್ಯ ನೆರವು ಮತ್ತು ಮಾರ್ಗದರ್ಶನವನ್ನು ಪಡೆಯತಕ್ಕದ್ದು.

**ನಿರ್ಣಯ:** ಕ್ರಮವಾಗಿ ಐ.ಕ್ಯೂ.ಎ.ಸಿ, ಪಿ.ಎಂ.ಇ ಮತ್ತು ಅಭಿವೃದ್ಧಿ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

k) **ವಿಷಯ:** ಕುಲಪತಿಗಳು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮುಂದೆ ಇರುವ ಪ್ರತಿ ಕಂಡಿಕೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ತೆಗೆದುಕೊಂಡು ಅನುಪಾಲನಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

**ನಿರ್ಣಯ:** ಕ್ರಮವಾಗಿ ಕುಲಪತಿ, ಹಣಕಾಸು ಅಧಿಕಾರಿ, ಕುಲಸಚಿವರು ಆಪ್ತ ಕಾರ್ಯಾಲಯಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

l) **ವಿಷಯ:** ಕುಲಪತಿಗಳು ತಮ್ಮ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸಂಬಂಧಪಟ್ಟವರೊಂದಿಗೆ ಪರಿಶೀಲಿಸಿ, ಕಂಡಿಕೆವಾರು ಉತ್ತರಗಳನ್ನು ಸಲ್ಲಿಸಿರುವ ಬಗ್ಗೆ ತಡೆಯಾಜ್ಞೆಗಳನ್ನು ತೆರೆಯಲು ನಿಯಮಗಳಂತೆ ಕ್ರಮವಹಿಸುವ

ಬಗ್ಗೆ ಹಾಗೂ ನ್ಯಾಯಾಲಯ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಕ್ರಮ ತೆಗೆದುಕೊಳ್ಳುವುದು. ಸಭೆಯ ನಡವಳಿಗಳನ್ನು ದಾಖಲಿಸಿ ಜಾಲತಾಣದಲ್ಲಿ ಪ್ರಕಟಿಸುವುದು.

**ನಿರ್ಣಯ:** ಕ್ರಮವಾಗಿ ಕಾನೂನು ಘಟಕ ಮತ್ತು ಯುಸಿಸಿಎಫ್ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

m) **ವಿಷಯ:** ಇನ್ನು ಮುಂದೆ ಪ್ರತಿ ತಿಂಗಳು ಪೂರ್ವ ನಿರ್ದಿಷ್ಟ ದಿನದಂದು ಕುಲಪತಿಗಳ ನೇತೃತ್ವದಲ್ಲಿ ನಿವೃತ್ತಿ ಆದ ಬೋಧಕ ಮತ್ತು ಬೋಧಕೇತರ ವೃಂದದವರಿಗೆ Pension Adalat ಅನ್ನು ಆಯೋಜಿಸುವುದು. ಈ Adalat ಗೆ ಕಡ್ಡಾಯವಾಗಿ ಕುಲಪತಿಗಳು, ಕುಲಸಚಿವರು (ಆಡಳಿತ) ಮತ್ತು ಆರ್ಥಿಕ ಅಧಿಕಾರ ಹಾಗೂ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆರವರುಗಳು ಕಡ್ಡಾಯವಾಗಿ ಹಾಜರಾಗಿ ಬರುವ ಕುಂದು ಕೊರತೆಗಳನ್ನು ನಿಯಮಾನುಸಾರ ಕಾಲಮಿತಿಯೊಳಗೆ ನಿವಾರಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

**ನಿರ್ಣಯ:** ಕ್ರಮವಾಗಿ ಹಣಕಾಸು ವಿಭಾಗ, ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ ಮತ್ತು ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಜಂಟಿ ನಿರ್ದೇಶಕರು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

n) **ವಿಷಯ:** ಡಿಸೆಂಬರ್ ಮಾಹೆ ಪೂರ್ತಿ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತಂತೆ ವಿಶ್ವವಿದ್ಯಾಲಯದ ಹಂತದಲ್ಲಿ ಹಾಗೂ ಕಾಲೇಜುಗಳ ಹಂತದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು. ಈ ಕಾರ್ಯಕ್ರಮಗಳಡಿಯಲ್ಲಿ ವಿಶೇಷ ಉಪನ್ಯಾಸಗಳು, ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆಗಳು, ರಸಪ್ರಶ್ನೆಗಳು ಹಾಗೂ ಇತರೆ ಚಟುವಟಿಕೆಗಳನ್ನು ಒಳಗೊಳ್ಳಬಹುದಾಗಿರುತ್ತದೆ. ಸಾಂಸ್ಕೃತಿಕ ಹಾಗೂ ಸಾಕ್ಷರತೆ ಸಂಬಂಧಿ ಚಟುವಟಿಕೆಗಳನ್ನು ಡಿಸೆಂಬರ್ ಮಾಹೆ ಪೂರ್ತಿ ನಡೆಸತಕ್ಕದ್ದು.
**ನಿರ್ಣಯ:** ಕ್ರಮವಾಗಿ ಎನ್.ಇ.ಪಿ. ಟಾಸ್ಕ್‌ಫೋರ್ಸ್ ಮತ್ತು ಶೈಕ್ಷಣಿಕ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

**ಸುಶಾಸನ ಪ್ರಶಸ್ತಿ ಬಗ್ಗೆ – 03**

ಪ್ರತಿ ವರ್ಷ ರಾಜ್ಯ ಸರ್ಕಾರದಿಂದ ಸುಶಾಸನ ದಿನದಂದು ಈ ಕೆಳಕಂಡ ಪ್ರವರ್ಗಗಳಡಿ ನೀಡಲಾಗುವ ಪ್ರಶಸ್ತಿಗಳ ವಿವರ.

i. **ವಿಷಯ:** Best Mentorship of Affiliated Colleges by the University.

**ನಿರ್ಣಯ:** ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗವು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

ii. **ವಿಷಯ:** Highest Employability / Best Placement University.
**ನಿರ್ಣಯ:** ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ (ಪ್ಲೇಸ್‌ಮೆಂಟ್ ಸೆಲ್)ವು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

iii. **ವಿಷಯ:** University having the best MoUs with Industry for Internship & Apprenticeship Embedded Programmes & Curriculum Revision for Employability.

**ನಿರ್ಣಯ:** ಕ್ರಮವಾಗಿ ಅಭಿವೃದ್ಧಿ ಮತ್ತು ಶೈಕ್ಷಣಿಕ ವಿಭಾಗಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

iv. **ವಿಷಯ:** Best University in E-Governance Practices.
**ನಿರ್ಣಯ:** ನೋಡಲ್ ಅಧಿಕಾರಿಗಳು, ಯುಯುಸಿಎಂಎಸ್ ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

v. **ವಿಷಯ:** Best Vice Chancellor, Best Registrar, Best Registrar, Evaluation, Best Finance Officer Awards.

vi. **ನಿರ್ಣಯ:** ಕ್ರಮವಾಗಿ ಕುಲಪತಿಗಳು, ಹಣಕಾಸು ಅಧಿಕಾರಿ, ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ)ರವರ ಆಪ್ತ ಕಾರ್ಯಾಲಯಗಳು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

vii. **ವಿಷಯ:** Best University in Indian Knowledge System.

**ನಿರ್ಣಯ:** ಪಿ.ಎಂ.ಇ. ಮಂಡಳಿಯು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

viii. **ವಿಷಯ:** Best University in Stakeholder conversations.
**ನಿರ್ಣಯ:** ಶೈಕ್ಷಣಿಕ ವಿಭಾಗವು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

ix. **ವಿಷಯ:** Best University in NEP implementation.
**ನಿರ್ಣಯ:** ನೋಡಲ್ ಅಧಿಕಾರಿಗಳು, ಯುಯುಸಿಎಂಎಸ್ ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

x. **ವಿಷಯ:** Best University in Examination practices.
**ನಿರ್ಣಯ:** ಕುಲಸಚಿವರು (ಪರೀಕ್ಷಾಂಗ) ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

xi. **ವಿಷಯ:** Best University in Faculty Development Programme.
**ನಿರ್ಣಯ:** ಐ.ಕ್ಯೂ.ಎ.ಸಿ ವಿಭಾಗವು ಈ ಬಗ್ಗೆ ಕಡ್ಡಾಯವಾಗಿ ಕ್ರಮ ಕೈಗೊಳ್ಳತಕ್ಕದ್ದು.

ಸಂಚಾಲಕರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

| | | |
|---|---|---|
| 1) | ಕುಲಪತಿಗಳು | ಸಹಿ |
| 2) | ಕುಲಸಚಿವರು (ಆಡಳಿತ) | ಸಹಿ |
| 3) | ಹಣಕಾಸು ಅಧಿಕಾರಿಗಳು | ಸಹಿ |
| 4) | ನೋಡಲ್ ಅಧಿಕಾರಿಗಳು<br>ಯು.ಯು.ಸಿ.ಎಂ.ಎಸ್ | ಸಹಿ |
| 5) | ಕುಲಪತಿಗಳ ವಿಶೇಷಾಧಿಕಾರಿಗಳು<br>(ಸಂಶೋಧನೆ ಮತ್ತು ಅಭಿವೃದ್ಧಿ) | ಸಹಿ |
| 6) | ಉಪಕುಲಸಚಿವರು<br>ಪ್ರಾಧಿಕಾರಗಳ ವಿಭಾಗ | ಸಹಿ |
| 7) | ಉಪಕುಲಸಚಿವರು<br>ದಾಸ್ತಾನು ಮತ್ತು ಖರೀದಿ ವಿಭಾಗ | ಸಹಿ |
| 8) | ಉಪಕುಲಸಚಿವರು<br>ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ | ಸಹಿ |
| 9) | ಸಂಯೋಜನಾಧಿಕಾರಿ<br>ಯು.ಸಿ.ಸಿ.ಎಫ್ ವಿಭಾಗ | ಸಹಿ |
| 10) | ಉಪಕುಲಸಚಿವರು<br>ಎಸ್ಟೇಟ್ ವಿಭಾಗ | ಸಹಿ |

**ಕುಲಸಚಿವ**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನ ಸಹ್ಯಾದ್ರಿ**
**ಶಂಕರಘಟ್ಟ–577 451. ಶಿವಮೊಗ್ಗ ಜಿಲ್ಲೆ**